**ಇಂದು ದಿನಾಂಕ:** 09.06.2026 **ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು : ವಾದಿ ಪರ ಶ್ರೀ. ಟಿ.ಎಸ್.ಆರ್ ವಕೀಲರಿಂದಃ**

ಈ ಕೇಸಿನ ಸಂಪೂರ್ಣ ವಿಚಾರ ನನಗೆ ಗೊತ್ತಿದೆ. ದಾವ ಆಸ್ತಿಗಳನ್ನು ಮೂಲತಃ ನನ್ನ ತಾತ ಸಿದ್ದೇಗೌಡ ಕ್ರಯ ಮಾಡಿಕೊಂಡಿದ್ದರು. ದಾವ ಆಸ್ತಿಗಳು ಮೂಲತಃ ಮುನಿಸಿ ಸಿದ್ದೇಗೌಡರಿಗೆ ಸೇರಿತ್ತು ಎಂದರೆ ಸುಳ್ಳು. ಮುನಿಸಿ ಸಿದ್ದೇಗೌಡರಿಂದ ಅವರ ಮಗ ಸಿದ್ದೇಗೌಡರಿಗೆ ದಾವ ಆಸ್ತಿಗಳು ಬಂದಿದೆ ಎಂದರೆ ಸರಿ. ಮುನಿಸಿಸಿದ್ದೇಗೌಡರಿಂದ ದಾವ ಆಸ್ತಿಗಳು ಸಿದ್ದೇಗೌಡರಿಗೆ ಬಂದಿರುವುದರಿಂದ ಸಿದ್ದೇಗೌಡ ರವರ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸುಳ್ಳು. ದಾವ ಆಸ್ತಿಗಳು ಸಿದ್ದೇಗೌಡರ ಸ್ವಯಾರ್ಜಿತ ಆಸ್ತಿಗಳು ಎಂದು ತೋರಿಸಲು ನನ್ನ ಬಳಿ ದಾಖಲೆ ಇದೆ. ಅಂತಹ ದಾಖಲೆ ಎಂದರೆ ಕ್ರಯ ಪತ್ರ. ದಾವ ಆಸ್ತಿಗಳು ಸಿದ್ದೇಗೌಡರ ಪಿತ್ರಾರ್ಜಿತ ಆಸ್ತಿಗಳು ಎಂದು ನನ್ನ ಲಿಖಿತ ಹೇಳಿಕೆಯಲ್ಲಿ ಬರೆಸಿಲ್ಲ ಎಂದರೆ ಸುಳ್ಳು. ಸಿದ್ದೇಗೌಡರು ಯಾರಿಂದ ಯಾವ ದಿನಾಂಕದಂದು ಕ್ರಯ ಮಾಡಿಕೊಂಡಿದ್ದಾರೆ ಎಂದು ನನ್ನ ಲಿಖಿತ ಹೇಳಿಕೆಯಲ್ಲಿ ಬರೆಸಿಲ್ಲ ಎಂದರೆ ಸರಿ. ನನ್ನ ಲಿಖಿತ ಹೇಳಿಕೆಯಲ್ಲಿರುವ ವಿಷಯಗಳನ್ನು ನಾನು ಮತ್ತು 1 ನೇ ಪ್ರತಿವಾದಿ ಹೇಳಿ ಬರೆಯಿಸಿದ್ದೇವೆ. ಆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇಲ್ಲ ಎಂದರೆ ಸರಿ. ಸಿದ್ದೇಗೌಡ ದಾವ ಆಸ್ತಿಗಳನ್ನು ಖರೀದಿ ಮಾಡಿದ ಬಗ್ಗೆ ನಮ್ಮ ಬಳಿ ಯಾವುದೇ ದಾಖಲೆ ಇಲ್ಲ ಎಂದರೆ ಸುಳ್ಳು. ದಾವ ಆಸ್ತಿಗಳು ಸಿದ್ದೇಗೌಡರ ಪಿತ್ರಾರ್ಜಿತ ಆಸ್ತಿಯಾಗಿರುವುದರಿಂದ ಅವುಗಳನ್ನು ವಾದಿಗಳಿಗೂ ಸಹ ಭಾಗಂಶದ ಹಕ್ಕು ಇದೆ ಎಂದರೆ ಸರಿಯಲ್ಲ. ವಾದಿಗಳು ಮತ್ತು ನಾನು ಒಂದೇ ತಂದೆಯ ಮಕ್ಕಳು ಎಂದರೆ ಸರಿಯಲ್ಲ. ವಾದಿಗಳು ಸಿದ್ದೇಗೌಡರ ಮಕ್ಕಳಲ್ಲ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಕೊಟ್ಟಿಲ್ಲ. ವಾದಿಗಳು ಸಿದ್ದೇಗೌಡರ ಮಕ್ಕಳಲ್ಲ ಎಂದು ತೋರಿಸಲು ದಾಖಲೆಗಳು ನಮ್ಮ ಬಳಿ ಇದೆ. ಅಂತಹ ದಾಖಲೆ ಎಂದರೆ ವಂಶವೃಕ್ಷ ಒಂದೇ. ಅದನ್ನು ಮುಂದಿನ ದಿನಗಳಲ್ಲಿ ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇಲ್ಲ. ವಾದಿಗಳು ಸಿದ್ದೇಗೌಡರ ಮಕ್ಕಳಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವ ಆಸ್ತಿಗಳ ಮೇಲೆ ಸಿದ್ದೇಗೌಡರಿಗೆ ಸಂಪೂರ್ಣ ಹಕ್ಕು ಇಲ್ಲದಿದ್ದ ಕಾರಣ ದಿಃ 28.10.1976 ರಂದು ನಮಗೆ ದಾನ ಪತ್ರ

ಬರೆಯಲು ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ಆ ಕಾರಣದಿಂದ ದಾನ ಪ್ರಕಾರ ಕಾನೂನು ಪ್ರಕಾರ ಊರ್ಜಿತ ಆಗಿಲ್ಲ ಎಂದರೆ ಸರಿಯಲ್ಲ. ದಾನ ಪತ್ರದ ಮೇಲೆ ನಾನು ಖಾತೆ ಮಾಡಿಸಿಕೊಂಡಿರುವುದರಿಂದ ಮೋಸದ ಖಾತೆಯಾಗಿರುತ್ತದೆ ಎಂದರೆ ಸುಳ್ಳು. ದಾವ ಆಸ್ತಿಗಳಲ್ಲಿ ವಾದಿಗಳು ಸ್ವಾಧೀನ ಇದ್ದಾರೆ ಎಂದರೆ ಸರಿಯಲ್ಲ. ನಾವು ಸ್ವಾದೀನ ಇದ್ದೇವೆ. ದಾವ ಆಸ್ತಿಯಲ್ಲಿ ವಾದಿಗಳು ಬೋರ್ ವೆಲ್ ತೆಗೆಸಿ ವಿದ್ಯುತ್ ಸಂಪರ್ಕ ಪಡೆದುಕೊಂಡಿದ್ದಾರೆ ಎಂದರೆ ಸರಿ. ದಾವ ಆಸ್ತಿಯಲ್ಲಿ ಎರಡು ಬೋರ್ ವೆಲ್ ಗಳಿದೆ ಎಂದರೆ ಸರಿಯಲ್ಲ ಒಂದು ಬೋರ್ ವೆಲ್ ಇದೆ. ದಾವ ಆಸ್ತಿಯಲ್ಲಿರುವ ಕೊಳವೆ ಬಾವಿಗಳನ್ನು ನಾವು ತೆಗೆಸಿದ್ದೇವೆ ಎಂದು ಲಿಖಿತ ಹೇಳಿಕೆಯಲ್ಲಿ ಬರೆಸಿದ್ದೇವೆ. ಬೋರ್ ವೆಲ್ ಈಗ ಚಾಲ್ತಿಯಲ್ಲಿದೆ. ಬೋರ್ ವೆಲ್ ಚಾಲ್ತಿಯಲ್ಲಿರುವ ಬಗ್ಗೆ ಯಾವುದೇ ದಾಖಲೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ದಾವ ಆಸ್ತಿಯಲ್ಲಿರುವ ಕೊಳವೆ ಬಾವಿ ತನ್ನ ಸ್ವಾಧೀನದಲ್ಲಿದೆ ಎಂದು ವಾದಿಗಳು ದಾಖಲೆ ಕೊಟ್ಟಿದ್ದಾರೆ ಎಂದರೆ ಸುಳ್ಳು. ವಾದಿಗಳು ಹಾಜರು ಪಡಿಸಿರುವ ದಾಖಲೆಗಳನ್ನು ನೋಡಿಲ್ಲ. ದಾಖಲೆ ನೋಡದೆ ಸುಳ್ಳು ಎಂದು ಹೇಗೆ ಹೇಳುತ್ತಿದ್ದೀರಾ ಎಂದರೆ ಅಲ್ಲಿ ಬೋರ್ ವೆಲ್ ಇರಲಿಲ್ಲ ಎನ್ನುತ್ತಾರೆ. ದಾವ ಸಲ್ಲಿಸುವ ಕಾಲಕ್ಕೆ ದಾವ ಆಸ್ತಿಗಳಲ್ಲಿ ಏನು ಬೆಳೆಯಲಾಗಿತ್ತು ಎಂಬ ಬಗ್ಗೆ ದಾಖಲೆ ಹಾಜರು ಪಡಿಸಿಲ್ಲ. ವಾದಿಗಳಿಗೆ ಮೋಸ ಮಾಡಬೇಕೆಂಬ ಉದ್ದೇಶದಿಂದ ಸಿದ್ದೇಗೌಡರ ಪಿತ್ರಾರ್ಜಿತ ಆಸ್ತಿಗಳನ್ನು ಸ್ವಯಾರ್ಜಿತ ಆಸ್ತಿಗಳೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

**ಓ.ಹೆ.ಕೆ.ಸರಿ ಇದೆ.**

ಸಹಿ/-

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**